# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 208
ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 12.08.2025
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಚಿಕ್ಕಮಗಳೂರು ನಗರಕ್ಕೆ ಹೊಸದಾಗಿ ಮಹಾಯೋಜನೆ ಸಿದ್ಧಪಡಿಸಿ ಅನುಷ್ಠಾನಗೊಳಿಸದೇ ಇರುವುದರಿಂದ ಹಳೇ ಮಹಾಯೋಜನೆಯನ್ನೇ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಹೊಸದಾಗಿ ಮಹಾಯೋಜನೆ ಅನುಷ್ಠಾನಗೊಳಿಸದೇ ಇರಲು ಕಾರಣಗಳೇನು; | ಬಂದಿದೆ,<br>ಸರ್ಕಾರದ ಆದೇಶ ಸಂಖ್ಯೆ:ನಅಇ 554 ಮೈಅಪ್ರಾ 2010 ದಿ:07.12.2010 ರಲ್ಲಿ ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-1) ಗೆ ಅನುಮೋದನೆಯಾಗಿದೆ.<br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(ಡಿ) ರನ್ವಯ ಸರ್ಕಾರದಿಂದ ಅಂತಿಮ ಅನುಮೋದನೆಯಾದ ಮಹಾಯೋಜನೆಯನ್ನು ಹತ್ತು ವರ್ಷಗಳಿಗೊಮ್ಮೆ ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿದೆ.<br>ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ: ನಅಇ 233 ಮೈಅಪ್ರಾ 2025(ಇ), ದಿನಾಂಕ: 04.07.2025 **(ಅನುಬಂಧ-1)** ರಲ್ಲಿ ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-II) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ. |
| (ಆ) | ನಿಯಮಗಳ ಅನುಸಾರ ಮಹಾಯೋಜನೆಯನ್ನು ಎಷ್ಟು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು; ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈ ಹಿಂದೆ ಮಹಾಯೋಜನೆ ಸಿದ್ಧಪಡಿಸಿದ್ದು ಯಾವಾಗ; ಇದು ಎಲ್ಲಿಯವರೆಗೆ ಊರ್ಜಿತವಾಗಿರುತ್ತದೆ; | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(ಡಿ) ರನ್ವಯ ಸರ್ಕಾರದಿಂದ ಅಂತಿಮ ಅನುಮೋದನೆಯಾದ ಮಹಾಯೋಜನೆಯನ್ನು ಹತ್ತು ವರ್ಷಗಳಿಗೊಮ್ಮೆ ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿದೆ.<br>ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ಧಪಡಿಸಲಾದ ಮಹಾಯೋಜನೆ (ಪರಿಷ್ಕೃತ-I) ಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 554 ಮೈಅಪ್ರಾ 2010, ದಿ:07.12.2010 ಅಂತಿಮ ಅನುಮೋದನೆ ನೀಡಲಾಗಿರುತ್ತದೆ.<br>ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-II)ಗೆ ಸರ್ಕಾರದಿಂದ ಅಂತಿಮ ಅನುಮೋದನೆ ದೊರೆಯುವವರೆಗೂ ಹಾಲಿ ಮಹಾಯೋಜನೆ (ಪರಿಷ್ಕೃತ-I) ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| (ಇ) | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಯಾವಾಗ ಹೊಸ ಮಹಾಯೋಜನೆ ಪ್ರಕಟಿಸಲಾಗುವುದು ಹಾಗೂ ಎಷ್ಟು ಎಕರೆ ಭೂಮಿಯನ್ನು ಭೂ ಉಪಯೋಗ ಬದಲಾವಣೆ ಮಾಡಲಾಗಿದೆ? (ವಿವರ ಒದಗಿಸಿ) | ಸರ್ಕಾರದ ಆದೇಶ ಸಂಖ್ಯೆ:ನಅಇ 233 ಮೈಅಪ್ರಾ 2025(ಇ), ದಿನಾಂಕ: 04.07.2025 ರಲ್ಲಿ ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ್ ಸಿಟಿ ಯೋಜನೆ 1.0 ಅಡಿ ಸಿದ್ಧಪಡಿಸಲಾದ GIS ಆಧಾರಿತ ಮಹಾಯೋಜನೆ(ಪರಿಷ್ಕೃತ-II) ಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದ್ದು,<br><br>ತಾತ್ಕಾಲಿಕ ಅನುಮೋದನೆಯಾಗಿರುವ ಮಹಾಯೋಜನೆ (ಪರಿಷ್ಕೃತ-II) 2041 ರ ನಕ್ಷೆ ಹಾಗೂ ವರದಿಯ ಕುರಿತು ಸಾರ್ವಜನಿಕರ ಸಲಹೆ/ ಸೂಚನೆ / ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ: 16.07.2025 ರಂದು ಪತ್ರಿಕಾ ಪ್ರಕಟಣೆ ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಕೋರಲಾಗಿದ್ದು, 60 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ **(ಅನುಬಂಧ-2).** ಸ್ವೀಕರಿಸಲಾಗುವ ಸಲಹೆ/ ಆಕ್ಷೇಪಣೆಗಳ ಕುರಿತು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸರ್ಕಾರಕ್ಕೆ ಸ್ವೀಕೃತವಾಗುವ ಪ್ರಸ್ತಾವನೆಯನ್ನು ಪರಿಶೀಲಿಸಿ ಅಂತಿಮ ಅನುಮೋದನೆ ನೀಡುವ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುವುದು.<br><br>ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 14(ಎ) ರನ್ವಯ ಮತ್ತು ಕಲಂ 69 (2) ಈವರೆವಿಗೂ ಒಟ್ಟು 225 ಎಕರೆ 08½ಗುಂಟೆ ಪ್ರದೇಶವನ್ನು ಭೂ ಉಪಯೋಗ ಬದಲಾವಣೆ ಮಾಡಲಾಗಿದ್ದು ವಿವರಗಳನ್ನು **ಅನುಬಂಧ-3** ರಲ್ಲಿರಿಸಿದೆ. |

ಕಡತ ಸಂಖ್ಯೆ: ನಅಇ 358 ಮೈಅಪ್ರಾ 2025

(ಬಿ.ಎಸ್.ಸುರೇಶ)

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೬೦<br>Volume - 160 | ಬೆಂಗಳೂರು, ಮಂಗಳವಾರ, ೨೨ ಜುಲೈ, ೨೦೨೫ (ಆಷಾಢ ೩೧, ಶಕವರ್ಷ ೧೯೪೭)<br>BENGALURU, TUESDAY, 22 JULY, 2025 (ASHADHA 31, SHAKAVARSHA 1947) | ಸಂಚಿಕೆ ೧೪೧<br>Issue 141 |
|---|---|---|

## ಭಾಗ ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚಿಕ್ಕಮಗಳೂರು ನಗರದ ಅಮೃತ್ ಸಿಟಿ ಯೋಜನೆ 1.0 ಅಡಿಯಲ್ಲಿ ಜಿಐಎಸ್ ಆಧಾರಿತ ಮಹಾಯೋಜನೆ(ಪರಿಷ್ಕೃತ-II)ಗೆ ತಾತ್ಕಾಲಿಕ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ನಅಇ 773 ಮೈಅಪ್ರಾ 2008, ದಿನಾಂಕ:31.12.2008.
2. ಸರ್ಕಾರದ ಆದೇಶ ಸಂಖ್ಯೆ:ನಅಇ 554 ಮೈಅಪ್ರಾ 2010, ದಿನಾಂಕ:07.12.2010.
3. ಸರ್ಕಾರದ ಆದೇಶ ಸಂಖ್ಯೆ:ಸಂಖ್ಯೆ: ನಅಇ 11 ಟಿಟಿಪಿ 2018, ದಿನಾಂಕ:01.08.2018.
4. ಆಯುಕ್ತರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು ರವರ ಪತ್ರ ಸಂಖ್ಯೆ:ನಅಪ್ರಾಚಿ/ನಯೋವಿ/ ಮ.ಯೋ.ಪ-2/ 2024-25/2556, ದಿನಾಂಕ:05.02.2025.
5. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ರವರ ಏಕ ಕಡತ ಸಂಖ್ಯೆ:DTCP 1 MPF 2021-22, ದಿನಾಂಕ: 16.05.2025.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ(ಪ-I) 2021 ಕ್ಕೆ ಅಂತಿಮ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರದ ಆದೇಶದಂತೆ, ಚಿಕ್ಕಮಗಳೂರು ನಗರಕ್ಕೆ ಅಮೃತ್ ಸಿಟಿ ಯೋಜನೆ 1.0 ಅಡಿ ಜಿಐಎಸ್ ಆಧಾರಿತ ತಾತ್ಕಾಲಿಕ ಮಹಾಯೋಜನೆ(ಪರಿಷ್ಕೃತ-II) ಯನ್ನು ತಯಾರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಆಯುಕ್ತರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು ಇವರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 9 ರಿಂದ 12 ರನ್ವಯ ಚಿಕ್ಕಮಗಳೂರು ನಗರದ ಅಮೃತ್ ಸಿಟಿ ಯೋಜನೆ 1.0 ಅಡಿಯಲ್ಲಿ GIS ಆಧಾರಿತ ತಾತ್ಕಾಲಿಕ ಮಹಾಯೋಜನೆ(ಪರಿಷ್ಕೃತ-II)ಯನ್ನು ಸಿದ್ಧಪಡಿಸಿ, ಸದರಿ ಕಾಯ್ದೆಯ ಕಲಂ 13(1) ರನ್ವಯ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಚಿಕ್ಕಮಗಳೂರು ಸ್ಥಳೀಯ ಯೋಜನಾ ಪ್ರದೇಶದ ಜನಸಂಖ್ಯೆಯು 2011 ರಲ್ಲಿ 131079 ಇದ್ದು, 20 ವರ್ಷಗಳ ಯೋಜನಾ ಅವಧಿಗೆ ಅಂದರೆ, 2041 ನೇ ಇಸವಿಗೆ ಜನಸಂಖ್ಯೆಯು ಸುಮಾರು 250000 ಆಗಬಹುದೆಂದು ಅಂದಾಜಿಸಿ ಮಹಾಯೋಜನೆಯನ್ನು ತಯಾರಿಸಲಾಗಿದೆ. ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 6752.68 ಹೆಕ್ಟೇರ್ ವಿಸ್ತೀರ್ಣದಲ್ಲಿ 3425.66 ಹೆಕ್ಟೇರ್ ಪ್ರದೇಶವನ್ನು ನಗರೀಕರಣ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆಯನ್ನು ರೂಪಿಸಲಾಗಿದೆ. ಚಿಕ್ಕಮಗಳೂರು ಪಟ್ಟಣದ ಜನಸಂಖ್ಯೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಹಾಲಿ ಬೆಳವಣಿಗೆಯ ಗತಿ, ರಸ್ತೆಗಳ ಹಾಲಿ ಪರಿಚಲನೆ ವ್ಯವಸ್ಥೆಯ ಸಮಸ್ಯೆಗಳನ್ನು ವಿಶ್ಲೇಷಿಸಿ ಯೋಜನಾ ತತ್ವಗಳಿಗನುಗುಣವಾಗಿ ಹಾಗೂ ಮಹಾಯೋಜನೆ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಲ್ಲಿ ನಿಗಧಿಪಡಿಸಿರುವ ಅಂಶಗಳನ್ನು ಪರಿಗಣಿಸಿ ನಗರದ ಮುಂದಿನ ಬೆಳವಣಿಗೆಗೆ, ವಿವಿಧ ಉಪಯೋಗಗಳಿಗೆ ಬೇಕಾಗಬಹುದಾದ ಭೂಮಿಯನ್ನು ಈ ಕೆಳಗಿನಂತೆ ಕಾಯ್ದಿರಿಸಿ ಮಹಾಯೋಜನೆ ತಯಾರಿಸಲಾಗಿದೆ.

ಪಟ್ಟಣದ ಯೋಜಿತ ಬೆಳವಣಿಗೆಗಾಗಿ ನಗರೀಕರಣ ಎಲ್ಲೆ ಎಂದು ಪ್ರಸ್ತಾಪಿಸಿರುವ 3425.66 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 1659.23 ಹೆಕ್ಟೇರ್ (ಶೇ.48.44), ವಾಣಿಜ್ಯಕ್ಕಾಗಿ 162.23 ಹೆಕ್ಟೇರ್ (ಶೇ.4.74), ಕೈಗಾರಿಕೆಗಾಗಿ 145.49 ಹೆಕ್ಟೇರ್ (ಶೇ.4.25), ಸಾರ್ವಜನಿಕ / ಅರೆ ಸಾರ್ವಜನಿಕ ಉಪಯೋಗಕ್ಕೆ 332.93 ಹೆಕ್ಟೇರ್ (ಶೇ.9.72), ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 438.20 ಹೆಕ್ಟೇರ್ (ಶೇ.12.79), ಸಾರ್ವಜನಿಕ ಉಪಯುಕ್ತತೆಗಾಗಿ 9.63 ಹೆಕ್ಟೇರ್ (ಶೇ.0.28) ಹಾಗೂ ಸಾರಿಗೆ / ಸಂಪರ್ಕ ವಲಯಕ್ಕೆ 677.95 ಹೆಕ್ಟೇರ್(ಶೇ.19.78) ಪ್ರದೇಶವನ್ನು ಮೀಸಲಿಟ್ಟು ಭೂ ಉಪಯೋಗವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆ(ಪ-II) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ಕ್ರಮ ಸಂಖ್ಯೆ (5) ರ ಏಕ ಕಡತದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರವರು ಸದರಿ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 233 ಮೈಅಪ್ರಾ 2025(ಇ), ಬೆಂಗಳೂರು, ದಿನಾಂಕ:04.07.2025.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ನಗರದ ಅಮೃತ್ ಸಿಟಿ ಯೋಜನೆ 1.0 ಅಡಿಯಲ್ಲಿ ಜಿಐಎಸ್ ಆಧಾರಿತ ಮಹಾಯೋಜನೆ(ಪರಿಷ್ಕೃತ-II)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ. ಮಹಾಯೋಜನೆ(ಪರಿಷ್ಕೃತ-II)ಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

PR-153

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೬೦<br>Volume 160 | ಮೈಸೂರು, ಗುರುವಾರ, ೧೦, ಜುಲೈ, ೨೦೨೫ (ಆಷಾಢ, ೧೯, ಶಕವರ್ಷ, ೧೯೪೭)<br>MYSURU, THURSDAY, 10, JULY, 2025 (ASHADHA, 19, SHAKAVARSHA, 1947) | ಸಂಚಿಕೆ ೨೬<br>Issue 26 |
|---|---|---|

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.


## ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ


ಹಿರೇಮಗಳೂರು ವಸತಿ ಬಡಾವಣೆ, ಒಂದನೇ ಹಂತ, ಹಿರೇಮಗಳೂರು-ಕಡೂರು ಬೈಪಾಸ್ ರಸ್ತೆ, ಕಲ್ಯಾಣನಗರ, ಚಿಕ್ಕಮಗಳೂರು-577102.

ಕಛೇರಿ: 08262-295712 ವೆಬ್ ಸೈಟ್ : www.chikmagalur.uda.gov.in ಇ-ಮೇಲ್ : cmr_cudackm@yahoo.in


ಕ್ರ.ಸಂ. ನಅಪ್ರಾಚಿಮ : ನಯೋ : ಮ.ಯೋ.ಪ-II (2041) : 2025-26 /1053 ದಿನಾಂಕ: 07.07.2025

## ::: ಸಾರ್ವಜನಿಕ ಪ್ರಕಟಣೆ :::

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-II) 2041 ರ ತಾತ್ಕಾಲಿಕ ಅನುಮೋದನೆಗಾಗಿ ನಕ್ಷೆ ಮತ್ತು ವರದಿಗಳೊಂದಿಗೆ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಅದರಂತೆ **ಸರ್ಕಾರದ ಆದೇಶ ಸಂಖ್ಯೆ. ನಅಇ : 233 : ಬೆಂರೂಪ್ರಾ : 2025 (ಇ), ಬೆಂಗಳೂರು, ದಿನಾಂಕ04-07-2025** ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮಹಾಯೋಜನೆ (ಪರಿಷ್ಕೃತ-II) 2041 ರ ನಕ್ಷೆ ಹಾಗೂ ವರದಿಯನ್ನು ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಸಾರ್ವಜನಿಕ ವೀಕ್ಷಣೆಗಾಗಿ ಇಡಲಾಗಿದ್ದು, ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗಾಗಿ ಖುದ್ದಾಗಿ ಅಥವಾ ನೋಂದಣಿ ಅಂಚೆಯ ಮೂಲಕ ಆಯುಕ್ತರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು ರವರಿಗೆ ಸಲ್ಲಿಸುವಂತೆ ಹಾಗೂ 60 ದಿನಗಳ ನಂತರ ಬಂದ ಯಾವುದೇ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/-
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

PD-40



ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

## ಬೆಳವಾಡಿ ಮಂಜುನಾಥ

## ವಿರೋಧಪಕ್ಷಕ್ಕೆ ಗ್ಯಾರಂಟಿ ಯೋಜನೆ ಟೀಕಿಸುವ ನೈತಿಕತೆ ಇಲ್ಲ

## ಕವಿತೆಗಳು ಅನುಭವ ಶೋಧಕ್ಕೆ ದಾರಿ ತೆರೆಯುತ್ತವೆ: ಸ.ಗಿರಿಜಾಶಂಕರ



### ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

www.chikmagalurda.gov.in cmt_cudackm@yahoo.in

### — ::: ಸಾರ್ವಜನಿಕ ಪ್ರಕಟಣೆ ::: —

Akshara Thorana Mudranalaya, Near Cambridge School K.M.Road, Chikkamagaluru-577101, Chikkamagalur Dist. Karnataka. Published and Owned ... Printed at AKSHARA THORANA MUDRANALAYA, Near Cambridge School K.M.Road, Chikkamagalur-577101, Chikkamagalur Dist. Karnataka. ... No 2261, Karnataka Vilaya Back Side, Cown Kalave, Chikkamagalur-577101, Chikkamagalur Dist. Karnataka. Editor: K.S.KISHORAKUMAR

Scanned with OKEN Scanner